

# ಗಾಂಧಿನಗರ ಪೋಸ್ಟ್

■ ರಘು



## ಆಯೇಷಾ ಜಯಹೇ!

'ತವರಿಗೆ ಬಾ ತಂಗಿ' ಚಿತ್ರದ ಯಶಸ್ವಿ ನಿರ್ಮಾಪಕ ಆರ್.ಎಸ್.ಗೌಡ ಮತ್ತೆರಡು ಚಿತ್ರಗಳ ನಿರ್ಮಾಣಕ್ಕೆ ಕೈಹಾಕಿದ್ದಾರೆ. ಅವುಗಳಲ್ಲೊಂದು ಆಯೇಷಾ ನಾಯಕಿಯಾಗಿ ನಟಿಸಲಿರುವ ಚಿತ್ರ. ಆಯೇಷಾ ಎಂದಮೇಲೆ ಅದು ನಾಯಕಿ ಪ್ರಧಾನ ಹಾಗೂ ಸಾಹಸ ಪ್ರಧಾನ ಸಿನಿಮಾ ಎನ್ನುವುದು ಖಚಿತ.

'ಜಯಹೇ' ಚಿತ್ರದಲ್ಲಿನ ಸಾಹಸ ದೃಶ್ಯಗಳಲ್ಲಿ ಆಕೆಯನ್ನು ಕಂಡವರೆಲ್ಲ ಅಚ್ಚರಿಯಿಂದ ಹುಬ್ಬೇರಿಸಿದ್ದರು. ಥ್ರಿಲ್ಲರ್ ಮಂಜು ನಿರ್ದೇಶನದ ಆ ಚಿತ್ರದ ಜೀವಂತಿಕೆಯೇ ಆಯೇಷಾ. ಕ್ಲಿಷ್ಟಕರವಾದ ಅನೇಕ ಸಾಹಸ ದೃಶ್ಯಗಳನ್ನು ಆಕೆ ಡ್ಯೂಪ್ ಇಲ್ಲದೆಯೇ ಸಲೀಸಾಗಿ ನಿಭಾಯಿಸಿದ್ದರು. ಆ ಹುರುಪನ್ನು ಮತ್ತೆ ತೆರೆಯ ಮೇಲೆ ಕಾಣಿಸುವ ಪ್ರಯತ್ನ ಆರ್.ಎಸ್.ಗೌಡ ಅವರದ್ದು. ಈ ಚಿತ್ರವನ್ನು ಆನಂದ್ ಪಿ.ರಾಜು ನಿರ್ದೇಶಿಸುತ್ತಿದ್ದಾರೆ.

ಆಯೇಷಾ ಕರಾಟೆಯಲ್ಲಿ ಬ್ಲಾಕ್ ಬೆಲ್ಟ್ ಪಡೆದಿರುವ ಗಟ್ಟಿಗಿತ್ತಿ. ಆಕೆಗೆ ನಟನೆ ಹೊಸತಲ್ಲ. ತೆಲುಗಿನ ಕೆಲವು ಚಿತ್ರಗಳಲ್ಲಿ ಬಾಲನಟಿಯಾಗಿ ನಟಿಸಿರುವ ಅನುಭವ ಅವರದ್ದು. ನಾಯಕಿಯಾಗಿ 'ಜಯಹೇ' (ಇದು ತೆಲುಗಿನಲ್ಲೂ ನಿರ್ಮಾಣಗೊಂಡಿದೆ) ಮೂಲಕ ಚಿತ್ರರಂಗಕ್ಕೆ ಮರುಪ್ರವೇಶ ಮಾಡಿರುವ ಆಯೇಷಾಗೆ ಸಾಹಸಪ್ರಧಾನ ಚಿತ್ರಗಳಲ್ಲಿ ಹೆಸರು ಮಾಡುವ ಆಸೆ.

## ಅಸ್ಮಿತೆಯ ಹುಡುಕಾಟ



ಸ್ಮಿತಾ, 'ಅವ್ವ' ಚಿತ್ರದಲ್ಲಿನ ನಟನೆಯಿಂದ ಉದ್ಯಮದ ಗಮನಸೆಳೆದ ಕೃಷ್ಣ ಸುಂದರಿ. ಆದರೆ, ಸಾವಂತ್ರಿ ಪಾತ್ರದಲ್ಲಿನ ಬಿಡುಬೀಸು ನಟನೆ ಅವರಿಗೆ ಹೆಚ್ಚಿನ ಅವಕಾಶಗಳನ್ನು ತಂದುಕೊಡಲಿಲ್ಲ. 'ಆತ್ಮೀಯ' ಎನ್ನುವ ಮತ್ತೊಂದು ಚಿತ್ರದಲ್ಲಿ ಚುರುಕಾಗಿ ನಟಿಸಿದ್ದರೂ ಉದ್ಯಮಕ್ಕೆ ಆಕೆಯೇಕೊ ಪಥ್ಯವೆನ್ನಿಸಲಿಲ್ಲ. 'ಅವಕಾಶ ಇಂದು ಬಂದಾವು, ನಾಳೆ ದೊರೆತಾವು' ಎನ್ನುವ ನಿರೀಕ್ಷೆಯಲ್ಲಿ ತಮಿಳಿನಲ್ಲೂ ಸ್ಮಿತಾ ಅದೃಷ್ಟ ಪರೀಕ್ಷೆ ನಡೆಸಿದ್ದರು. ಈಗ ತೆಲುಗಿನತ್ತ ಅವರ ದೃಷ್ಟಿ ಹರಿದಿದೆ. ಇದೇ ಸಮಯದಲ್ಲಿ ಅಶೋಕ್ ಪಾಟೀಲ್ ನಿರ್ದೇಶನದ '9 ಟು 12' ಕನ್ನಡ ಚಿತ್ರದಲ್ಲೂ ಅವರಿಗೆ ನಾಯಕಿ ಪಾತ್ರ ದೊರೆತಿದೆ.

ತೆಲುಗು ಚಿತ್ರವೊಂದರಲ್ಲಿ ಅವಕಾಶ ಪಡೆದಿರುವ ಸ್ಮಿತಾ ಅಲ್ಲಿ ತಮ್ಮ ಹೆಸರು ಬದಲಿಸಿಕೊಂಡಿದ್ದಾರೆ. ನಿವೇದಿತಾ ಎನ್ನುವುದು ತೆಲುಗು ಅಮ್ಮಾಯಿ ರೂಪದಲ್ಲಿರುವ ಅವರ ಹೊಸ ಹೆಸರು. ಇನ್ನು ಪಾಟೀಲರ '9 ಟು 12' ಆಕೆಯದು ಕಾಯಿಪಲ್ಲೆ ಮಾರುವ ಹುಡುಗಿಯ ಪಾತ್ರ. ಅಭಿನಯಕ್ಕೆ ಸಾಕಷ್ಟು ಅವಕಾಶವಿರುವ ಈ ಪಾತ್ರ ಅದೃಷ್ಟವನ್ನೂ ತಂದುಕೊಡಬಹುದು ಎನ್ನುವುದು ನಿರೀಕ್ಷೆ.

